

# ಕೊಡಗಿನ ‘ಮಿನಿ ಮ್ಯೂಸಿಯಂ’

**ಕೊಡಗಿನ ಪುರಾತನ ವಸ್ತುಗಳ ಸಂಗ್ರಹ ಈ ದಂಪತಿಯ ಖುಷಿಯ ಹವ್ಯಾಸ.**

■ ಪುತ್ತರಿರ ಕರುಣ್‌ಕಾಳಯ್ಯ ಚೆಟ್ಟಳ್ಳಿ

ಕಾಲ ಎಷ್ಟೇ ವೇಗವಾಗಿ ಓಡುತ್ತಿದ್ದರೂ ಹಳೆಯದನ್ನು, ಕಳೆದುಹೋದದ್ದನ್ನು ಮೆಲುಕು ಹಾಕುವ ಖುಷಿಯೇ ಬೇರೆ. ಆ ಖುಷಿಯೇ ಕೊಡಗಿನ ಈ ದಂಪತಿಗೆ ಪ್ರೇರಣೆ.

ಹಳೆ ಕಾಲದ ವಸ್ತುಗಳನ್ನು ಈಗಿನ ಪೀಳಿಗೆ ನೋಡಬೇಕು, ಅವುಗಳ ಹಿಂದಿನ ಕಥೆಯನ್ನು ತಿಳಿಯಬೇಕೆಂಬ ಉದ್ದೇಶದೊಂದಿಗೆ, ಕೊಡಗಿನಲ್ಲಿ ಪ್ರಾದೇಶಿಕವಾಗಿ ಬಳಸುತ್ತಿದ್ದ ಹಲವು ಪುರಾತನ ವಸ್ತುಗಳನ್ನು ಸಂಗ್ರಹಿಸಿದ್ದಾರೆ ಬಾಚರಣಿಯಂಡ ಅಪ್ಪಣ್ಣ ಹಾಗೂ ರಾಣು ಅಪ್ಪಣ್ಣ ದಂಪತಿ. ಈ ಪುರಾತನ ವಸ್ತುಗಳಿಗೆ ತಮ್ಮ ಮನೆಯನ್ನೇ ಮಿನಿ ಸಂಗ್ರಹಾಲಯ ಮಾಡಿಕೊಂಡಿದ್ದಾರೆ.

ಕುಶಾಲನಗರದ ಅಪ್ಪಣ್ಣ ಮಾಸ್ಟರ್ ಮನೆಯೊಳಗೆ ಹೋಗುತ್ತಿದ್ದಂತೆ ಸುಮಾರು 40–50 ವರ್ಷಗಳ ಹಿಂದೆ ಕೊಡಗಿನಲ್ಲಿ ಬಳಸಲಾಗುತ್ತಿದ್ದ ಸಾಕಷ್ಟು ವಸ್ತುಗಳು ಕಾಣಸಿಗುತ್ತವೆ. ಅಡುಗೆಗೆ, ಬಟ್ಟೆಬರೆ ಇಟ್ಟುಕೊಳ್ಳಲು, ಧಾನ್ಯ ದಾಸ್ತಾನಿಗೆ, ಬೇಟೆ, ಕೃಷಿಗೆ, ಹೀಗೆ ಹಲವು ಉದ್ದೇಶಕ್ಕೆ ಬಳಸಲಾಗುತ್ತಿದ್ದ ಸಂದೂಕ, ಕುರಿ ಮುಕ್ಕಾಲಿ, ಚೆಪ್ಪು, ಪೋಳಿಯಾ, ನೂಪೊಟ್ಪೊರ, ಸೇರ್, ಮಾನ, ತೇಂಗಲ, ಮರದದುಡಿ, ಕಡಾವು, ಬೀರಾಳಿಪೊಟ್ಟಿ, ಕಂಜಿಕಲ, ಕಳಿಕೋಲ್, ಎಲ್‌ತಟ್ಟೆಗಳನ್ನು ಇಲ್ಲಿ ಕಾಣಬಹುದು.



ಪಲಿಯ, ಪೋಂದಾಯಚಂದುಕ, ಕುರಿಕುಟ್ಟ್, ನೂಪುಟ್ಪೊರ, ಚೇಕಲ, ಉದಿ, ಪರೆ, ಗುಜಾಯಿ, ಮಂಗರುವ, ಮೀಂಬಾಳ್, ಹೀಗೆ ನೂರೈವತ್ತಕ್ಕೂ ಅಧಿಕ ಪುರಾತನ ವಸ್ತುಗಳು ಇವರ ಸಂಗ್ರಹದಲ್ಲಿವೆ. ಗತಕಾಲವೊಂದನ್ನು ಕಾಣಿಸುವ ಈ ವಸ್ತುಗಳು ನೋಡುಗರ ಮನಸೆಳೆಯುತ್ತವೆ.





ಬೆಟ್ಟಗುಡ್ಡಗಳಿಂದ ಕೂಡಿ ವಿಶಿಷ್ಟ ಸಂಸ್ಕೃತಿಯ ನೆಲವಾದ ಕೊಡಗಿನ ಮೂಲನೆಲೆಯಾದ ಐನ್‌ಮನೆಗಳಲ್ಲಿ ಮಣ್ಣು, ಕಲ್ಲು, ಮರ, ಬೆತ್ತ, ಬಿದಿರು, ವಾಟೆಯಿಂದ ತಯಾರಿಸಿದ ವಿವಿಧ ವಸ್ತುಗಳು ಕಾಲ ಕಳೆದಂತೆ ಅಟ್ಟದಲ್ಲಿ ಮೂಲೆಸೇರಿದ್ದವು. ಆಧುನಿಕ ರೂಪದ ಮನೆ ಕಟ್ಟುವಾಗ ಎಷ್ಟೋ ಹಳೆಯ ವಸ್ತುಗಳನ್ನು ಎಸೆಯಲಾಗಿತ್ತು. ಅಂಥ ಮೂಲೆ ಹಿಡಿದ, ಎಸೆದ ಅಪರೂಪದ ವಸ್ತುಗಳನ್ನು ಅಪ್ಪಣ್ಣ ಸಂಗ್ರಹಿಸತೊಡಗಿದರು. ಹಳೆಯ ವಸ್ತುಗಳು ಕಂಡದ್ದೇ ತಡ, ಕೊಂಡು ಬರುತ್ತಿದ್ದರು. ಒಂದೆರಡು ವಸ್ತುಗಳಿಂದ ಆರಂಭವಾದ ಅವರ ಸಂಗ್ರಹ ದಿನದಿಂದ ದಿನಕ್ಕೆ ಏರುತ್ತಿದೆ.

ಪ್ರತೀ ವರ್ಷ ಕೊಡಗಿನ ಕೈಲ್‌ಪೊಳ್ದ್ (ಕೈಲು ಮೂಹೂರ್ತ) ಆಚರಣೆಯ ದಿನ ಮನೆ ಮುಂದೆ ತಾವು ಸಂಗ್ರಹಿಸಿದ ವಸ್ತುಗಳನ್ನೆಲ್ಲ ಪ್ರದರ್ಶನಕ್ಕೆ ಇಡುತ್ತಾರೆ. ಇವರ ವಸ್ತುಸಂಗ್ರಹ ಕಾರ್ಯದ ಕುರಿತು ‘ಚಂಗೀರ’ ಎಂಬ ಪುಸ್ತಕವೂ ಪ್ರಕಟಗೊಂಡಿದೆ.

ಸಂಗ್ರಹ ಮಾತ್ರವಲ್ಲದೆ ಸಂಗ್ರಹಿಸಿದ ಒಂದೊಂದು ವಸ್ತುವನ್ನೂ ಹೇಗೆ ಮಾಡಲಾಗಿದೆ, ಯಾರು ಮಾಡುತ್ತಿದ್ದರು, ಯಾವ ಸಂದರ್ಭ ಬಳಸುತ್ತಿದ್ದರೆಂಬ ಬಗ್ಗೆ ತಿಳಿಸಿಕೊಡುತ್ತಾರೆ. ನಿವೃತ್ತ ಉಪನ್ಯಾಸಕನಾಗಿರುವ ಅಪ್ಪಣ್ಣ ಅವರಿಗೆ ಇಂಥ ಇನ್ನಷ್ಟು ವಸ್ತುಗಳನ್ನು ತಮ್ಮ ಸಂಗ್ರಹದ ಬತ್ತಳಿಕೆಗೆ ಸೇರಿಸುವ ಹುಮ್ಮಸ್ಸು. ■